ಬಣ್ಣಬಣ್ಣದ ತರಕಾರಿಗಳ ಹೆಸರುಗಳನ್ನು ಹೇಳಿ, ಒಂದೆರಡನ್ನು ಹಮೀದನ ಕೈಗೆ ಹಾಕಿ ಮುಟ್ಟಿನೋಡು, ವಾಸನೆ ಹ್ಯಾಗಿದೆ ನೋಡು ಎನ್ನುತ್ತಿದ್ದ. ಹಮೀದ್ ಇನ್ನೂ ಹುಡುಗನಾಗಿದ್ದಾಗಲೇ ಈ ಊರಿಗೆ ಬಂದು ಮುದುಕನ ಅಂಗಡಿಯಲ್ಲಿ ದುಡಿಯುತ್ತಿದ್ದವನು. ಅವನಿಗೆ ಮುದುಕ ಮುಫತ್ತಾಗಿ ಅನ್ನ ಹಾಕುತ್ತಿದ್ದ. ಕೊನೆಗೊಳ್ಳುತ್ತಿದ್ದ ಪ್ರತಿದಿನವೂ ಒಂಟಿಯಾಗಿಯೇ ಕಾಲ ಕಳೆಯುತ್ತಿದ್ದ ಹಮೀದನಿಗೆ ಆಗಾಗ ತನ್ನ ತಂದೆ ತಾಯಿಯ ಬಗ್ಗೆ, ತಾನು ಹುಟ್ಟಿದ ಊರಿನ ಬಗ್ಗೆ ಯೋಚಿಸುವಂತಾಗುತ್ತಿತ್ತು. ಈಗ ಅವನು ಮೊದಲಿನಷ್ಟು ಸಣ್ಣ ಹುಡುಗನೇನಲ್ಲ. ಆದರೂ ಹಾಗೆ ಯೋಚಿಸುವಾಗಲೆಲ್ಲ ತನ್ನನ್ನು ಬಿಟ್ಟುಹೋಗದ ಭಾವನೆಗಳಿಂದ ಘಾಸಿಗೊಂಡು ಅತ್ತುಬಿಡುತ್ತಿದ್ದ.

ಆ ಹುಡುಗಿ ಕಾಳುಕಡಿ, ಸಕ್ಕರೆ ಕೊಂಡುಕೊಳ್ಳುವುದಕ್ಕಾಗಿ ಮತ್ತೆ ಅಂಗಡಿಗೆ ಬಂದಾಗ ಹಮೀದ್ ತಕ್ಕಡಿಯಲ್ಲಿ ಸ್ವಲ್ಪ ಹೆಚ್ಚೇ ತೂಗಿ ಕೊಟ್ಟ. ಅದನ್ನು ಗಮನಿಸಿದ ಹುಡುಗಿ ನಕ್ಕಳು. ಅವಳ ಆ ನಗು ಲೇವಡಿಮಾಡುವಂತಿದೆಯೆಂದು ಅನ್ನಿಸಿದರೂ ಒಂದು ಬಗೆಯ ಸಂತೋಷದಿಂದ ಉಬ್ಬಿಹೋದ. ಮುಂದಿನ ಸಲ ಬಂದಾಗ ಅವಳು ಅವನ ಯೋಗಕ್ಷೇಮ ವಿಚಾರಿಸುವಂತೆ ನಾಲ್ಕು ಒಳ್ಳೆಯ ಮಾತು ಆಡಿದಳು. ಆಮೇಲೆ ತನ್ನ ಹೆಸರು ರುಖಿಯಾ ಎಂದೂ ಈಚೆಗಷ್ಟೇ ತಾನು ತನ್ನ ನೆಂಟರ ಮನೆಗೆ ಬಂದಿರುವುದಾಗಿಯೂ ಹೇಳಿದಳು.

"ಮನೆ ಎಲ್ಲಿ?" ಎಂದು ಕೇಳಿದ ಹಮೀದ್.

"ಮೆವೆಂಬೇಮಾರಿಂಗೋದಲ್ಲಿ" ಎಂದ ಅವಳು ಅದು ತುಂಬಾ ದೂರದಲ್ಲಿದೆಯೆಂದು ಸೂಚಿಸುವ ಹಾಗೆ ಒಂದು ದಿಕ್ಕಿನಲ್ಲಿ ಕೈಚಾಚಿದಳು. "ಅಲ್ಲಿಗೆ ಹೋಗಬೇಕಾದರೆ ಗಲ್ಲಿಗಳನ್ನು ದಾಟಿಕೊಂಡು ಬೆಟ್ಟಗುಡ್ಡ ಹತ್ತಿಳಿಯಬೇಕು."

ಹಗಲಿನಲ್ಲಿ ನೀಲಿಬಣ್ಣದ ಹತ್ತಿಯ ಬಟ್ಟೆಬರೆಗಳಲ್ಲಿರುತ್ತಿದ್ದ ಆಕೆ ಒಬ್ಬ ಮನೆಗೆಲಸದವಳಿರಬೇಕು. ಎಲ್ಲಿ ಕೆಲಸ ಮಾಡುತ್ತಿ ಎಂದವನು ಕೇಳಿದಾಗ ಮೊದಲು ಅದೇನೂ ಅಂಥ ಮುಖ್ಯ ವಿಷಯವಲ್ಲವೆನ್ನುವಂತೆ ಹ್ಞೂಂ ಎಂದು ರಾಗವೆಳೆದವಳು, ಆಮೇಲೆ ಒಂದು ಒಳ್ಳೆಯ ಕೆಲಸ ಸಿಕ್ಕುವವರೆಗೂ ನಗರದ ಹೊಸ ಹೋಟೆಲೊಂದರಲ್ಲಿ ಮೇಯ್ಡ್ ಆಗಿರುವುದಾಗಿ ಹೇಳಿದಳು.

"ತುಂಬಾ ಒಳ್ಳೆಯ ಹೋಟೆಲು – ಈಕ್ವೇಟರ್. ಅಲ್ಲಿ ಈಜುಕೊಳ ಇದೆ, ಎಲ್ಲೆಲ್ಲೂ ಕಾರ್ಪೆಟ್ಟುಗಳಿವೆ. ಅಲ್ಲಿಗೆ ಬರೋರೆಲ್ಲರೂ ಮುಝುಂಗುಗಳು (ಯೂರೋಪಿಯನ್ನರು). ಕೆಲವರು ಇಂಡಿಯನ್ನರೂ ಬಂದಿರೋದುಂಟು. ಆದರೆ, ಹಾಸಿಗೆ ಬಟ್ಟೆ ಗಲೀಜುಮಾಡೋ ಈ ಕಾಡುಜನ ಅಂತೂ ಒಬ್ಬರೂ ಇಲ್ಲಪ್ಪಾ."

ಒಂದೆರಡು ದಿನಗಳ ನಂತರ ರಾತ್ರಿ ಅಂಗಡಿಯ ಬಾಗಿಲು ಹಾಕಿದ ಮೇಲೆ ಹಿತ್ತಲಿನ ಮಲಗುವ ಕೋಣೆಯ ಬಾಗಿಲಿನಲ್ಲಿ ನಿಂತುಕೊಳ್ಳತೊಡಗಿದ ಹಮೀದ್. ಆ ಹೊತ್ತಿನಲ್ಲಿ ಹಗಲೆಲ್ಲ ಜನಜಂಗುಳಿಯಿಂದಿದ್ದು ಅಪಾಯಕಾರಿ ಎನಿಸುತ್ತಿದ್ದ ಬೀದಿಗಳು ಖಾಲಿ ಖಾಲಿ; ಸದ್ದುಗದ್ದಲವೂ ಇಲ್ಲ. ಹಮೀದ್ ಆಗಾಗ ರುಖಿಯಾಳ ಬಗ್ಗೆ ಯೋಚಿಸುತ್ತಿದ್ದ, ಅವಳ ಹೆಸರು ಹೇಳಿಕೊಳ್ಳುತ್ತಿದ್ದ. ಆದರೆ, ಅವಳ ಬಗ್ಗೆ ಯೋಚಿಸಿದಷ್ಟೂ ಅವನ ಒಂಟಿತನ, ದರಿದ್ರ ಸ್ಥಿತಿ ಹೆಚ್ಚಾಗುತ್ತಿದ್ದವು. ಅವಳು ಮೊಟ್ಟ ಮೊದಲು ರಾತ್ರಿಯ ಕತ್ತಲಿನಲ್ಲಿ ಮುಳುಗಿಹೋಗುವ ಮುಂಚೆ ತನ್ನನ್ನು ಹೇಗೆಲ್ಲ ನೋಡಿದ್ದಳೆಂದು ನೆನಪು ಮಾಡಿಕೊಳ್ಳುತ್ತಿದ್ದ. ಅವಳನ್ನು ಮುಟ್ಟಬೇಕೆನಿಸಿತ್ತು... ವರ್ಷಗಟ್ಟಲೆ ಕಗ್ಗತ್ತಲಿನಲ್ಲಿದ್ದುದರಿಂದಲೋ ಏನೋ, ಈಗ ವಿದೇಶದ ಬೀದಿಗಳನ್ನು ನೋಡುತ್ತಾ ನಿಂತಿರುತ್ತಿದ್ದವನಿಗೆ ಅಪರಿಚಿತ ಹುಡುಗಿಯೊಬ್ಬಳ ಸ್ಪರ್ಶವನ್ನು ಕಲ್ಪಿಸಿಕೊಳ್ಳುವುದರಲ್ಲೇ ಏನೋ ಸುಖ.

ಒಂದು ರಾತ್ರಿ ಬೀದಿಯಲ್ಲಿ ಕಾಲಿಟ್ಟವನು ಬಾಗಿಲಿಗೆ ಚಿಲಕ ಹಾಕಿದ. ನಿಧಾನವಾಗಿ ತೀರ ಹತ್ತಿರದ ಒಂದು ಬೀದಿ ದೀಪದ ಬಳಿಗೆ ಹೋದವನು ಅನಂತರ ಅಂಥ ಒಂದೊಂದೇ ದೀಪಗಳ